ಕರಿಯವ್ವನ ದನಿ ಆತಂಕದಲ್ಲಿತ್ತು. 'ಇಲ್ಲೇನ ನಡ್ದೋಗಿ ಬಿಟ್ಟೈತೆ, ಈ ಊರ್ ಜನ ನನ್ನ ಮೊಮ್ಮುಗುನ್ನ ಬದ್ಕಕೆ ಬಿಡಲ್ಲ, ಈಗಿಂದೀಗ್ಲೆ ಹೊಲ್ಟ್ ಬಾರಪ್ಪ' ಅಂತ ಅಳತೊಡಗಿದಳು. ಆತಂಕಕ್ಕೊಳಗಾದ ದುರ್ಗಯ್ಯ ಸೀದ ಕೊನೆಹಳ್ಳಿಗೆ ಬಂದು ಹೊಲುಕ್ಕೆ ಕೆಲ್ಸಕ್ಕೋಗಿದ್ದ ಹೆಂಡ್ತಿ ಗಂಗಮ್ಮುನ್ನು ಕರ್ಕಂಡು, ಸ್ಕೂಲಿಂದ ಬಂದ ಮಕ್ಳನ್ನ ನೋಡ್ಕೆಣುವಂತೆ ಪಕ್ಕದ ಮನೆ ಸಾಬ್ರಿಗೇಳಿ ನಾಕ್ ಗಂಟೆ ಬಸ್ ಹತ್ಕೆಂಡು ಮಾದಾಪುರಕ್ಕೆ ಬಂದ. ಎಂದಿನಂತೆ ಎದುರಿಗೆ ಬರದ ಮಗ ಎಲ್ಲಿ ಎಂದು ಆ ಮೂಲೆ ಈ ಮೂಲೆಯನ್ನೆಲ್ಲ ಹುಡುಕಿರೂ ಸಿಗದಿದ್ದಾಗ ಕದಿನ ಮೂಲೆಲೆ ಬಾಯಿಗೆ ಸೀರೆ ಕೊಟ್ಕಂಡು ಗುಳು ಗುಳು ಅಂತ ಕಣ್ಣೀರ ಕೋಡಿ ಹರುಸ್ತಿದ್ದ ಅವ್ವ ಕರಿಯವ್ವುನ್ನ 'ಎಲ್ಲವ್ವ ಟಿಪ್ಪು, ಯಾಕವ್ವ ಅಳ್ತಿದಿಯ? ಎಂದು ಗಂಗವ್ವ ತಾನೂ ಕಣ್ಣೀರಾಕತೊಡಗಿದಳು. ಸಾವರಿಸಿಕೊಂಡ ನಂಜವ್ವ ಬೆಳಿಗ್ಗೆ ಇಸ್ಕೂಲಿಗೆ ಹೋದನು ಇನ್ನು ಬಂದಿಲ್ಲ ಕಣವ್ವ ಎನ್ನುತ್ತ. ಟಿಪ್ಪುವಿನ ಜೊತೆ ಓದುತ್ತಿದ್ದ ಹಟ್ಟಿಯ ಮಂಜ, ಮಾರುತಿ ಹೇಳಿದ ಘಟನೆಯನ್ನ ಒಪ್ಪಿಸತೊಡಗಿದಳು.

ಓದದ್ರಲ್ಲಿ ಮುಂದಿದ್ದ ಟಿಪ್ಪು ಅಕ್ಷರನೂ ದುಂಡಗೆ ಬರಿಯನು. ಅವನ ಈ ವಿದ್ಯೆಯಿಂದಾಗಿ ತರಗತಿಯ ಮೇಲ್ಜಾತಿ ಹುಡುಗಿಯರೂ ಈತನನ್ನು ಹಿಂಬಾಲಿಸಿ ಮಾತನಾಡಿಸುತ್ತಿದ್ದರು. ಸ್ಕೂಲ್ ಬಿಟ್ಟಾಗ ಬಹಳ ದೂರದ ಹೊರೆಗೆ ಈತನೊಂದಿಗೆ ಹೆಜ್ಜೆ ಹಾಕುತ್ತಿದ್ದ ಹುಡುಗ ಹುಡುಗಿಯರು ಕೊನೆಯದಾಗಿ ಟಾಟಾ ಮಾಡಿ ಕಳುಹಿಸುತ್ತಿದ್ದರು. ಅದರಲ್ಲೂ ಪಟೇಲರ ವಂಶದ ಈಗಿನ ಪಂಚಾಯ್ತಿ ಪ್ರೆಸಿಡೆಂಟ್ ದೇವರಾಜಣ್ಣನ ಮಗಳು ಸ್ವಾತಿ ಈತನನ್ನ ಬಹಳವಾಗಿ ಹಚ್ಚಿಕೊಂಡಿದ್ದಳು. ತಾನು ತರುವ ತಿಂಡಿಯಲ್ಲಿ ಸಮಪಾಲು ಕೊಡುತ್ತಿದ್ದ ಈಕೆ ಓದಿನಲ್ಲಿ ಟಿಪ್ಪುವಿನೊಂದಿಗೆ ಪೈಪೋಟಿಗೆ ಬಿದ್ದಿದ್ದಳು. ಅಕಸ್ಮಾತ್ ಏನಾದ್ರು ಆಕೆ ಸ್ಕೂಲಿಗೆ ತಪ್ಪಿಸಿಕೊಂಡಳೆಂದರೆ, ಮರುದಿನ ಹಿಂದಿನ ದಿನದ ನೋಟ್ಸ್, ಹೋಮ್ ವರ್ಕ್ ಮುಂತಾದವನ್ನ ಟಿಪ್ಪುವಿನಿಂದ ಕೇಳಿ ಪಡೆದು ಬರೆದು ಒಪ್ಪಿಸುತ್ತಿದ್ದಳು. ಈ ನಿಮಿತ್ತವಾಗಿ ಹಲವು ಬಾರಿ ಇವರಿಬ್ಬರು 'ಕಾರ್ಗಿಲ್ ಸ್ಟೋರ್' ಹತ್ತಿರ ಜೋಡಿಯಾಗಿ ಹೋಗಿಬಂದದ್ದಿದೆ. ಸ್ವಾತಿಯನ್ನ ಪ್ರೀತಿಯಿಂದ ಮಾತನಾಡಿಸುತ್ತಿದ್ದ ಅಲ್ಲಿನ ದೇಶಭಕ್ತ ಟಿಪ್ಪುವಿನತ್ತ ಕೆಕ್ಕರಿಸುವುದ ಬಿಟ್ಟಿರಲಿಲ್ಲ.

ಮೊನ್ನೆ ಹೀಗೆ ಆಗಿದೆ, ಶಾಲೆಗೆ ಆಬ್ಸೆಂಟ್ ಆಗಿದ್ದ ಸ್ವಾತಿ, ಟಿಪ್ಪುವಿನಿಂದ ನೆನ್ನೆಯ ಸಮಾಜಶಾಸ್ತ್ರದ ನೋಟ್ಸ್ ಪಡೆದುಕೊಂಡು ಮನೆಗೆ ಹೋಗುವ ಮುನ್ನ ಕೆಲ ಭಾಗವನ್ನ ಜೆರಾಕ್ಸ್ ಹಾಕಿಸಿಕೊಳ್ಳುವ ಸಲುವಾಗಿ ಕಾರ್ಗಿಲ್ ಬುಕ್ ಸ್ಟೋರ್‌ಗೆ ಹೋಗಿದ್ದಾಳೆ. ಪುಟ ಮಗುಚುವಾಗ ಅದರ ಪ್ರಾರಂಭದ ಹಾಳೆಯಲ್ಲಿ ಟಿಪ್ಪು ಹುಲಿಯೊಂದಿಗೆ ಸೆಣಸುತ್ತಿರುವ ಚಿತ್ರಗಳಿರುವುದನ್ನ ದೇಶಭಕ್ತ ನೋಡಿದ್ದಾನೆ. ಅಷ್ಟು ಮಾತ್ರ ಸ್ಪಷ್ಟವಾಗಿ ಹೇಳುವ ಹಟ್ಟಿಯ ಮಂಜ ಮತ್ತು ಮಾರುತಿ ಉಳಿದದ್ದನ್ನ ನೆನಸಿಕೊಳ್ಳುವುದು ಹೀಗೆ... ಮಧ್ಯಾಹ್ನ ಹನ್ನೆರೆಡು ಗಂಟೆ ಆಗಿ ಗಣಿತದ ಕ್ಲಾಸ್ ನೆಡಿತಿತ್ತು, ಪ್ರಸಿಡೆಂಟ್ ದೇವ್ರಾಜಣ್ಣ ಮತ್ತವರ ಕಡೆಯವರು ಕ್ಲಾಸಿಗೆ ನುಗ್ಗಿ 'ಯಾವನೊ ಟಿಪ್ಪು ಅನ್ನ ಸಾಬ್ರು ಸೂಳೆಮಗ, ನಮ್ಮುಡುಗಿಗೆ ಲವ್ ಲೆಟ್ರುಕ್ತಿಯ, ಎಷ್ಟು ಜನುಕ್ಕುಟ್ಟಿದಿಯೊ ನೀನು' ಎಂದು ದರದರನೆ ಕ್ಲಾಸಲ್ಲೆಲ್ಲ ಎಳೆದಾಡಿ ಮಕ ಮೂತಿ ಎಲ್ಲ ರಕ್ತ ಬರಂಗೆ ಹೊಡುದ್ರು, ಕಾಲ್ ಕಾಲಗೆ ಜಾಡ್ಸಿ ಒದ್ರು. ಮೇಷ್ಟ್ರುಗಳು ಬೆಪ್ಪಾದರಂಗೆ ನಿಂತ್ಕಂಡು ನೋಡ್ತಿದ್ರು. ಎಂದು ಹೇಳುತ್ತ 'ನಾನಲ್ಲ ಕಣಣ್ಣ, ನಂಗೇನು ಗೊತ್ತಿಲ್ಲ' ಎಂದು ಟಿಪ್ಪು ಕೈ ಕೈ ಮುಗಿದರೂ ಬಿಡ್ದಂಗೆ ಯಳ್ಕಂಡೋದ್ರು.

'ಆ ಕೂಡ್ಲೆ ಬಾಯ್ ಬಾಯ್ ಬಡ್ಕಂಡು ಒಂದೇ ಉಸಿರಿಗೆ ಸ್ಕೂಲ್ತಕೆ ಒಡೋಗಿ ಊರೆಲ್ಲ ಉಡ್ಕಿರು ಮೊಮ್ಮುಗ ಕಾಣಕಿಲ್ಲ. ಇಂತತ ಅವ್ನೆ ಅಂತ ಯಾರು ಬಾಯ್ ಬಿಡಕಿಲ್ಲ' ಅಂತ ಗಂಗವ್ವ ದುಃಖ ಕಾರಿಕೊಂಡಳು. ಕುಲ್ವಾಡಿ ತಿಮ್ಮುಜ್ಜ ಊಟ ನೀರು ಬಿಟ್ಟು 'ಅವ್ನವ್ವುನ್ ಬೇವರ್ಸಿನಾಕ್ಯಾಯ'